


## ಕಟ್ಟಡದ ಮೇಲೆ ನಿಂತ ಕಾರು

ಅರೇ...ಇದೇನಿದು? ರಸ್ತೆ ಮೇಲೆ ಓಡಾಡುವ ಕಾರು ಮನೆಯ ತಾರಸಿ ಏರಿದೆಯಲ್ಲ. ಅದೂ ಮೂರನೇ ಅಂತಸ್ತಿನ ಮೇಲೆ! ಹೌದು, ಬೆಳಗಾವಿ ಜಿಲ್ಲೆಯ ನಿಪ್ಪಾಣಿ ತಾಲ್ಲೂಕಿನ ಬೇಡಕಿಹಾಳ ಗ್ರಾಮದಲ್ಲಿ ಇಚಲಕರಂಜಿ ನಿಪ್ಪಾಣಿ ಹೆದ್ದಾರಿಗೆ ಹೊಂದಿಕೊಂಡಿರುವ ಸೂರಜ್ ನಾರೆ ಎಂಬುವವರು ತಮ್ಮ ಮನೆಯ ಮೇಲೆ 3–4 ವರ್ಷಗಳ ಹಿಂದೆ ಹೀಗೆ ಕಾರು ಇರಿಸಿದ್ದಾರೆ. ಈ ರಸ್ತೆಯಲ್ಲಿ ಓಡಾಡುವವರು ಕಾರು ನೋಡಿ ತಲೆಯಲ್ಲಿ ಹಲವು ಪ್ರಶ್ನೆಗಳನ್ನು ಹಾಕಿಕೊಂಡು ತಲೆ ಕೆರೆದುಕೊಂಡಿದ್ದಿದೆ.

ಐಟಿಐ ಓದಿದ್ದ ಸೂರಜ್ ನಾರೆ, ಕೆಂಪು ಬಣ್ಣದ ಕಾರು ಖರೀದಿಸಿ 14 ವರ್ಷಗಳ ಹಿಂದೆ ಚಾಲನಾ ತರಬೇತಿ ಕೇಂದ್ರ ತೆರೆದು, ನಾಲ್ಕೈದು ಕಾರು ಖರೀದಿಸುವಷ್ಟು ಸ್ಥಿತಿವಂತರಾದವರು. ಮೂರಂತಸ್ತಿನ ಮನೆಯನ್ನೂ ಕಟ್ಟಿದರು. ಇಷ್ಟೆಲ್ಲ ಆರ್ಥಿಕವಾಗಿ ಸ್ಥಿತಿವಂತರಾಗಲು ತಾವು ಮೊದಲು ಖರೀದಿಸಿದ್ದ ಕೆಂಪು ಕಾರು ಕಾರಣ ಎಂಬ ನಂಬಿಕೆ ಇವರದ್ದು. ತಮ್ಮನ್ನು ಎತ್ತರಕ್ಕೆ ಕೊಂಡೊಯ್ದ ಕಾರನ್ನೇ ತಮಗಿಂತಲೂ ಎತ್ತರಕ್ಕೇರಿಸಿ ಪೂಜಿಸಬೇಕೆಂದು ಕಳೆದ ನಾಲ್ಕು ವರ್ಷಗಳ ಹಿಂದೆ ಕ್ರೇನ್ ಮೂಲಕ ಮನೆಯ ಮೂರನೆ ಮಹಡಿಯ ತಾರಸಿಯ ಮೇಲೆ ಇರಿಸಿದ್ದಾರೆ.

ದೀಪಾವಳಿ, ದಸರಾ, ಅಮಾವಾಸ್ಯೆ ಸೇರಿದಂತೆ ವಿಶೇಷ ದಿನಗಳಲ್ಲಿ ಮನೆ ಮಂದಿಯೆಲ್ಲ; ಈ ಕಾರೇ ದೇವರು ಎಂದು ತಿಳಿದು ಪೂಜೆ ಸಲ್ಲಿಸಿ ನಮಿಸುತ್ತಾರೆ. ಕಾರಿನ ಮುಂದಿನ ಎರಡು ಚಕ್ರಗಳು ತಾರಸಿಯಿಂದ ಹೊರ ಚಾಚಿಕೊಂಡಿದ್ದರಿಂದ ರಸ್ತೆ ಮೂಲಕ ಹಾದು ಹೋಗುವವರ ಗಮನ ಸೆಳೆಯುವಂತಿದೆ. ಎಷ್ಟೋ ಪ್ರಯಾಣಿಕರು ತಮ್ಮ ವಾಹನ ನಿಲ್ಲಿಸಿ ಇವರ ಮನೆ ಮುಂದೆ ನಿಂತು ಸೆಲ್ಫೀ ತೆಗೆದುಕೊಳ್ಳುವುದನ್ನೂ ಕಾಣಬಹುದಾಗಿದೆ. ಇನ್ನು ಕೆಲವರು. ಅರೇ... ಮನೆ ಮೇಲೆ ಕಾರು ಬಿದ್ದೀತು ಎಂದು ಮನೆಯವರ ಗಮನಕ್ಕೆ ತಂದಿರೋ ಉದಾಹರಣೆಗಳೂ ಇವೆ.


–ಚಂದ್ರಶೇಖರ ಎಸ್. ಚಿನಕೇಕರ, ಚಿಕ್ಕೋಡಿ

## ನೇಪಥ್ಯಕ್ಕೆ ಸರಿಯುತ್ತಿರುವ ಗೊರಬೆ

ಕರಾವಳಿ ಭಾಗದಲ್ಲಿ ಎರಡು ಮೂರು ದಶಕಗಳ ಹಿಂದೆ ಭತ್ತದ ಗದ್ದೆಯಲ್ಲಿ, ತೋಟದಲ್ಲಿ ಕೆಲಸ ಮಾಡುವಾಗ ಕಾರ್ಮಿಕರು ಮಳೆಯಲ್ಲಿ ನೆನೆಯುವುದರಿಂದ ಪಾರಾಗಲು ಬಳಕೆ ಮಾಡುತ್ತಿದ್ದ ವಸ್ತುವೇ ಗೊರಬೆ. ಕಾಡಿನಲ್ಲಿ ಸಿಗುತ್ತಿದ್ದ ಬೆತ್ತ, ಕಿರುಬಿದಿರನ್ನು ಬಳಕೆ ಮಾಡಿಕೊಂಡು ಇದನ್ನು ತಯಾರಿಸುವವರ ಸಂಖ್ಯೆ ಸಾಕಷ್ಟು ಇತ್ತು. ಕಾರ್ಮಿಕರು ಇದನ್ನು ತಲೆಯ ಮೇಲೆ ಇಟ್ಟುಕೊಂಡು ಮಳೆಯಲ್ಲಿ ಕೆಲಸ ಮಾಡುತ್ತಿದ್ದರು. ಈಗ ಪ್ಲಾಸ್ಟಿಕ್ ಕವರ್‌ಗಳು ವ್ಯಾಪಕವಾಗಿ ಬಳಕೆ ಆಗುತ್ತಿವೆ. ಗೊರಬೆ ತಯಾರಿಸುವವರು ಕಡಿಮೆ ಆಗಿದ್ದಾರೆ. ಅಂತೆಯೇ ಬೇಡಿಕೆಯೂ ತಗ್ಗಿದೆ.

–ಅರುಣ್ ಕಿಲ್ಲೂರು





## ಬಲಮುರಿ ಶಂಖ

ಭಾರತೀಯರಲ್ಲಿ ಶಂಖ, ದೇವರ ಅಭಿಷೇಕ ಮತ್ತು ಮಂಗಳಾರತಿ ಸಮಯದಲ್ಲಿ ಬಳಕೆಯಾಗುತ್ತದೆ. ಬಹುತೇಕ ಶಂಖಗಳ ಒಳಸುಳಿ ಎಡಭಾಗಕ್ಕೇ ಇರುವುದು ಸಾಮಾನ್ಯ. ಬಲಭಾಗಕ್ಕೆ ಸುಳಿಯಿರುವ ಶಂಖಗಳು ಅತಿ ಶ್ರೇಷ್ಠ ಹಾಗೂ ಅವುಗಳನ್ನು 'ಬಲಮುರಿ ಶಂಖಗಳು' ಎಂದು ಕರೆಯಲಾಗುತ್ತದೆ. ಕಡಲಿನಿಂದ ಶಂಖಗಳನ್ನು ಕೋಟಿ ಸಂಖ್ಯೆಯಲ್ಲಿ ಆರಿಸಿದರೂ ಬಲಮುರಿ ಶಂಖಗಳು ಸಿಗುವುದು ಅಪರೂಪ. ಅಭಿಷೇಕಕ್ಕೆ ಬಳಸುವ ಶಂಖಗಳು ಸಿಕ್ಕಿದರೂ, ಅದರಲ್ಲಿ ಊದುವ ಶಂಖ ಸಿಗುವುದು ವಿರಳ. ಇಂಥದ್ದೊಂದು ಬಲಮುರಿ ಶಂಖವು ರಾಮೇಶ್ವರದ ದೇವಾಲಯದಲ್ಲಿ ಇದೆ ಎನ್ನಲಾಗುತ್ತದೆ. ಪೂಜೆ ವೇಳೆ ಊದುತ್ತಾರಂತೆ. ಇಂಥ ಇನ್ನೊಂದು ಶಂಖ ಬೆಳ್ತಂಗಡಿಯ ಗೋಪಾಲಕೃಷ್ಣ ದೇವಾಲಯದಲ್ಲಿದೆ. ಪುರಾತನವಾದ ಈ ಶಂಖ ಲಕ್ಷ್ಮೀ ದೇವಿಯ ನಿವಾಸ, ಇದನ್ನು ಊದುವಾಗ ಉಂಟಾಗುವ ಕಂಪನದಿಂದ ಧನಾತ್ಮಕ ಪರಿಣಾಮ ಉಂಟಾಗುತ್ತದೆ ಎಂಬ ನಂಬಿಕೆ ಇದೆ.



–ಪ. ರಾಮಕೃಷ್ಣ ಶಾಸ್ತ್ರಿ, ಬೆಳ್ತಂಗಡಿ